ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ಬೆಂಗಳೂರು ಗೊಲ್ಲರಪ್ಯಾಟೆಯಲ್ಲಿ ಯಿರತಕ್ಕ ದಿವಾಳಿಯಾದ ಡಿಕ್ರೀ ದೇಣೇದಾರ ತಿರಕಪ್ಪನ ವಿಷಯದಲ್ಲಿ—

ಸ॥ 1889ನೇ ಇಸವಿ ದಿವಾಳೀ ಕೇಸ್ ನಂಬರ್ 639.

ಹುಕುಂ

ಮೇಲ್ಕಂಡ ತಿರಕಪ್ಪನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿರಾದ ಮೆಸ್ಸರ್ ಅನಂತ ಸಾಮಿರಾಯರವರ ರೂಬರೂ ಅರ್ಜೀದಾರನಾದ ತಿರಕಪ್ಪನ್ನ ಖುದ್ದಾಗಿ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—ಯಾರುನ್ನೂ ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ತಿರಕಪ್ಪನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವೆದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಕ್ಯರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸದ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರಿ 14ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸಾಲಮೊತ್ತ.			ಸಾಲ ಯಾವಾಗದೆಯೋ ಆದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಷರಾ.
1	ಬಂಗಳೂರು ರಾಣಾಸಿಂಗನ ಪ್ಯಾಟೇಲಿರುವ ಸಿಂಗಪ್ಪನವರ ವೆಂಕಟರವಣಪ್ಪ ..	26	0	0	1888ನೇ ಜೂಲೈ 11	ಮನೆ ಬಾಡಿಗೆ ಬಾಬತು	
2	ಬೆಂಗಳೂರಲ್ಲಿರುವ ನೆಲ್ಲಮಂಡಿ ನಂಜಪ್ಪ ..	20	0	0	1889ನೇ ಜುಲೈ 11	ಕೈಸಾಲದ ಬಾಬತು	
3	ಡಿಟೋ ತರಗಿನಮಂಡಿ ಚಿಕ್ಕವೀರಪ್ಪ ..	33	0	0	1889 ಜನವರಿ 24	ಡಿಟೋ	
4	ಬೆಂಗಳೂರಲ್ಲಿರತಕ್ಕ ಬತಾಯಿ ನಾರಣಪ್ಪ ..	15	0	0	1889ನೇ ಮಾರ್ಚಿ 25	ಡಿಟೋ	
5	ಡಿಟೋ ಸಾವಂದಪ್ಪನವರ ಪಾಪಣ್ಣ ..	50	0	0	1888 ಜನವರಿ 24	ತಂಸೂಕು ಬಾಬತು	
6	ಡಿಟೋ ಗೊಲ್ಲರಪ್ಯಾಟೇಲಿರುವ ಕೊಪ್ಪದಪುಟ್ಟಪ್ಪ.	32	8	0	1888 ಜನವರಿ 5	ರಾಗಿ ತೆಗದುಕೊಂಡ ಬಾಬತು	
7	ಡಿಟೋ ಆಕ್ಕೀಪ್ಯಾಟೇಲಿರುವ ಚನ್ನಸಂದ್ರದ ಮುನಿಯಪ್ಪ ..	15	0	0	1889 ಜನವರಿ	ಕಂತು ಪತ್ರದ ಬಾಬತು	
8	ಡಿಟೋ ಉಪ್ಪನಮಂಡಿ ವೇಲುಮೊದಲಿಯಾರ್ರು ..	10	0	0	1889 ಜುಲೈ 10	ಕೈಸಾಲದ ಬಾಬತು	
9	ಡಿಟೋ ಕುಂಬಾರ ಪ್ಯಾಟೇಲಿರತಕ್ಕ ಗೊಲ್ಲರ ವೆಂಕಟಪ್ಪ ..	57	8	0	1888	ಬೆಂಗಳೂರು ಸಬ್ ಕೋರ್ಟು 1888 ಸಿವಿಲ್ 181ನೇ ಡಿಕ್ರಿ ಬಾಬತು	
	ಜುಮ್ಲಾ ..	259	0	0			

ಚಿಂತಾಮಣಿ ತಾಲ್ಲೂಕು ಕಿಂಗಸಂದ್ರದಲ್ಲಿ ಯಿರತಕ್ಕ ದಿವಾಳೀಯಾದ ಡಿಕ್ರೀ ದೇಣೇದಾರ ಚಿಕ್ಕ ಚವ್ವಡಪ್ಪನ ವಿಷಯದಲ್ಲಿ—

ಸ॥ 1889ನೇ ಇಸವಿ ದಿವಾಳೀ ಕೇಸ್ ನಂಬರ್ 1045.

ಹುಕುಂ

ಮೇಲ್ಕಂಡ ಚಿಕ್ಕಚವ್ವಡಪ್ಪನು, ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜಿರಾದ ಮೆಸ್ಸರ್ ಅನಂತಸಾಮಿರಾಯರವರ ರೂಬರೂ ಅರ್ಜೀದಾರನಾದ ಚಿಕ್ಕಚವ್ವಡಪ್ಪನ ಪರವಾಗಿ ಪ್ಲೀಡರ್ ಮೆಸ್ಸರ್ ಗಂಗಾಧರಯ್ಯನವರನ್ನು ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಖಾಸ್ತ್ಗೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ—ಯಾರನ್ನೂ ಹಾಜರಾಗಲಿಲ್ಲಾ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಚೆಕ್ಕ ಜಪ್ತುಪಡಿಸಿದ್ದನ್ನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿರಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

1890ನೇ ಇಸವಿ ಫಿಬ್ರವರಿ 21ನೇ ತಾರೀಖಿನಲ್ಲಿ ಈ ಕೋರ್ಟ್ಯಾವೊಹರ್ ನಮ್ಮ ದಸ್ತಖತ್ತೊಹನೆ ಕೊಡಲ್ಪಟ್ಟಿತು.

ಸೂಲದಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೆ ಉಂಟಾದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಷರಾ.
1	ಚಿಂತಾಮಣೀಲಿ ಯಿರತಕ್ಕ ಕೊಮರ್ಲ ವೆಂಕಟೇಶಯ್ಯ ..	114 0 0	ತಪಸೀಲ್ ನಿವಾರಿಸಿ ಇಟ್ಟಿದೆ.	ಈ ಕಾಲಂನಲ್ಲಿ ಸಮುದಾಯವನು ತಪಸೀಲು ನಿವಾರಿಸಿ ಇಟ್ಟಿದೆ.	
2	ಡಿಟೋ ಕಪ್ಪಲಮಡಗು ಲಕ್ಷ್ಮಕ್ಕಯ್ಯ ..	50 0 0			
3	ಜೇಗು ಮುನಿರಾಮಯ್ಯ ಚಿಂತಾಮಣಿ ..	20 0 0			
4	ವೋಲೇಟಿ ಸೀನಯ್ಯ ಡಿಟೋ ..	16 0 0			
5	ಚಿಂತಾಮಣಿ ತಾಲ್ಲೂಕು ದೇವನಪಲ್ಲೀಲಿರುವ ಚಿನ್ನಪ್ಪ ..	150 0 0			
6	ಚಿಂತಾಮಣಿಗೆ ಕೇರಿದ ತಿಮ್ಮಸಂದ್ರದಲ್ಲಿರತಕ್ಕ ದಾಸಪ್ಪ ..	30 0 0			
7	ಡಿಟೋ ಗ್ರಾಮದಲ್ಲಿರುವ ರಾಮಂಣ ..	20 0 0			
8	ಚಿಂತಾಮಣಿ ತಾಲ್ಲೂಕು ಬೈಲಪಲ್ಲಿ ಕದರಪ್ಪ ..	50 0 0			
9	ಡಿಟೋ ಗ್ರಾಮದಲ್ಲಿರುವ ಚಿನ್ನಪ್ಪ ..	50 0 0			
	ಜುಮ್ಲಾ ..	500 0 0			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಕೋಲಾರ ಡಿಸ್ಟ್ರಿಕ್ಟ್ ಮಾಜಿಸ್ಟ್ರೇಟ್ ಕೋರ್ಟ್‌ನಿಂದ.

ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ಕೋಲಾರ ಟವ್ನ ಕುನ್ನೀರಕುಂಟೇ ನೀರಿನಲ್ಲಿ ಸ್ಯ ಗುಜಸ್ತ ಡಿಸಂಬರ್ ತಾರೀಖು 5ರಲ್ಲು ಬಿದ್ದು ಮೃತಪಟ್ಟ ವಾಜರ ಪಾಪೀ 1 ಮಗಳು ಲಕ್ಷ್ಮಿ 1 ಇವರ ಬಾಬತು ಕಿಟ್ಟಿ—೩ ೧೦ ಸದರೀ ಯವರಿಬ್ಬರ ಮೈ ಮೇಲೆ ಮತ್ತು ಕೀರೇ ವಡಿವೆ ಸಹ ದೊರತ ನಗಗಳು—

ಕಿಳಿ॥ ಭಂಗಾರದ ವಡಿವೆಗಳು
೫ ॥ ೧೦ ನಗದು
೯ ೩ ಹಿತ್ತಾಳೀಬಗೆ
೯ — ಕಂಚಿನಬಗೆ

೨೧ । ೦ ಬೆಳ್ಳೀನಗಗಳು.
೯೩ ಬೊಂಬಾಯಿ ಮುತ್ತುಗಳು ಮತ್ತು ಸರಗಳು.
೦ ॥ ಮಣಿಗಳ ಬಾಬತು.

ಕಿಟ್ಟಿ ೯೩ ೧೦.

೨೦ ॥ = ೧೧ ಇವರು ವಾಸವಾಗಿದ್ದ ಮನೆಯಲ್ಲಿ ದೊರತದ್ದು ಹಿತ್ತಾಳೆ ತಾಂಬ್ರ ಕಂಚು ಖಬ್ಬಿಣದ ಪಾತ್ರೆಗಳು ಮತ್ತು ಈ ಬಾಬತು ಮರದ ಸಾಮಾನು ಬಟ್ಟೆಗಳು ಪತ್ರಗಳು ಸುದಾ.

ಕ್ರ್ಯ III = ೯ ಈ ಪ್ರಕಾರ ಪಟ್ಟು ಆಗಿ ಮೇಲೆ ಕಂಡ ಸ್ವತ್ತುಗಳು ಅಮಾನತ್ತು ಇರುವದಾಗಿಯೂ ಸದರೀ ಹೆಂಗಸರಿಗೆ ವಾರಸುದಾರ್ರೆಂಬ ಮುಳಬಾಗಲು ತಾಲ್ಲೂಕು ಮಲವೆನಹಳ್ಳಿ ವಾಸಸ್ಥರಾಮಂಣ ೧ ತ್ರೀನಿವಾಸಪುರ ರೇಂಜು ದೊಡ್ಡಪ್ಪನಹಳ್ಳಿ ಸೋನಾರ ಮುನೆಪ್ಪ ೧ ಬೈಯಾಚಾರಿ ೧ ಸಹ ಹಾಜರಾಗಿ ವಾರಸು ಸಂಗತಿ ದೃಷ್ಟಪಡಿಸಿದವರಾಗಲಿಲ್ಲಯಂತಲೂ ಸಹ ಕೋಲಾರ ತಾಲ್ಲೂಕು ಅಮಲ್ದಾರರವರಿಂದ ರಿಪೋರ್ಟು ತಉಪಿದ್ದರಲ್ಲಿ ನಮೂದಾಗುವದು ಹೊರ್ತು ಇವರಿಗೂ ಸದರೀ ಹೆಂಗಸರಿಗೂ ಅನೇಕ ವರುಷಗಳಿಂದ ಸಂಬಂಧ ತಪ್ಪುಹೋಗಿರುವಂತೆ ತಿಳಿಯಬರುತಲಿದೆ. ಐರ್ಜ ಪಾಪಿಯು ಮೇಮಗಲ್ಲು ನಾರಣಪ್ಪನ ರಖಾವುದಾರಳಾಗಿದ್ದ ಮಾತ್ರಕ್ಕೇನೇ ಸದರೀ ನಾರಣಪ್ಪನ ತಮ್ಮ ರಂಗಯ್ಯನು ಇಂಥಾ ಶೇವಾರನ್ ಹೆಂಗಸಿನ ಸ್ವತ್ತುಗಳು ತನಿಗೆ ಬರಬೇಕೆಂತ ಹೇಳುವದಕ್ಕೂ ನಿಮಿತ್ಯವಿಲ್ಲವಾಗಿದೆ. ಈ ಕಾರಣಗಳಿಂದ ಡಿಟೋ ಯಿಬ್ಬರು ಹೆಂಗಸರನ್ನೂ ಶೇವಾರನೆಂತ ತಿಳಿಯಬರುವ ಪ್ರಯುಕ್ತ ಈ ಸ್ವತ್ತುಗಳನ್ನ ಸ್ವಾಧೀನತೆ ಪಡಕೊಳ್ಳಲಿಕ್ಕೆ ಹಕ್ಕುವುಂಟೆಂಬ ಮನುಷ್ಯರು ಈ ಇಸ್ತಿಹಾರಿನ ತಾರೀಖು ಮೊದಲು ಆರು ತಿಂಗಳ ಒಳಗೇ ಡಿಸ್ಟ್ರಿಕ್ಟು ಮಜಕೂರು ಜನರಲ್ ಅಸಿಸ್ಟೆಂಟ್ ಕಮ್ಮಿಷನರವರ ವ ಫಸ್ಟ್ ಕ್ಲಾಸ್ ಮೇಜಸ್ಟ್ರೇಟ್ ಕೋರ್ಟಿನಲ್ಲಿ ಅವರ ರೂಬರೂ ಹಾಜರಾಗಿ ತಮ್ಮ ದಾವೆಯನ್ನು ಸ್ಥಾಪಿಸಿಕೊಡಬೇಕು. ತಪ್ಪಿದರೆ ವಾಯಿದೆ ಆದ ತರುವಾಯ ಶೇವಾರನು ಕಾಯಿದೇಪ್ರಕಾರ ಜಾರೀಲಿ ತರಲ್ಪಡುತ್ತಾಗಿ ತಿಳಿಯುವದು.

ತಾರೀಖು 13ನೇ ಮೇ 1890.

ಎ. ಕುಪ್ಪುಸಾಮಿ ಮೊದಲಿಯಾರ್,
ಫಾರ್ ಡಿಸ್ಟ್ರಿಕ್ಟು ಮೇಜಸ್ಟ್ರೇಟ್.

ನಗರ ಡಿವಿಜ್ಞ ಡಿಸ್ಟ್ರಿಕ್ಟು ಜಡ್ಜ್ರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 26.

ಮೃತಪಟ್ಟ ಚೆಲುವಂಣನ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಚನ್ನಪಿಳ್ಳೆ, ಮೃತಪಟ್ಟ ಸದರೀ ಚೆಲುವಂಣನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಚಿಕ್ಕಮುಗಳೂರು ಸ್ಥಳದ ಚನ್ನಪಿಳ್ಳೆಯು ಚಿಕ್ಕಮುಗಳೂರು ವಾಸಸ್ಥನಾಗಿ ಮೃತಪಟ್ಟ ಚೆಲುವಂಣನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚನ್ನಪಿಳ್ಳೆಯ ಅರ್ಜೀಯನ್ನು 1890ನೇ ಇಸವಿ ಜೂರ್ ತಿಂಗಳು ತಾರೀಖು 13ರಲ್ಲು ಕೇಳಿ ಸರ್ಟಿಫಿಕೇಟು ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚೆಲುವಂಣನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಅಥೆ.

1890ನೇ ಇಸವಿ ಏಪ್ರೆಲ್ ತಿಂಗಳು 1ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಡಿಸ್ಟ್ರಿಕ್ಟು ಜಡ್ಜ್.

ಪ್ರಕಟನೆ.

ತಾರೀಖು 30ನೇ ಏಪ್ರೆಲ್ 1890.

ಈ ಕೆಳಗೆ ನಮೂದಾಗುವ ಆನೆಗಳು ಮತ್ತು ಹರಾಜ್ ತಾರೀಖು ವರಿಗೆ ಹಿಡಿಯಲ್ಪಡುವ ಆನೆಗಳು ಸಹ 1890ನೇ ಇಸವಿ ಜೂರ್ ತಾರೀಖು 16ರಲ್ಲು ಮೈಸೂರಿನಿಂದ 20 ಮೈಲಿ ಫಾಸಲೆಯಲ್ಲಿ ಯಿರುವ ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರದ ಮೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಂಸರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂ.	ಹೆಸರು.	ಜಾತಿ.	ಯತ್ತರ ಅಡಿ	ಅಂಗುಲ.	ಹಿಡಿದ ತಾರೀಖು.	ಷರಾ.
1	ನರಸುಹ್ಮ ..	ಗಂಡು	6	6	21—2—90	
2	ಚಂದ್ರಕೇಖರ ..	ಡಿಟೋ	4	9	14—3—90	
3	ವರಲಕ್ಷ್ಮಿ ..	ಹೆಂಣು	6	0	ಡಿಟೋ	
4	ಗಜಲಕ್ಷ್ಮಿ ..	ಡಿಟೋ	7	6	ಡಿಟೋ	